ಶ್ರೀ ಬಿ.ಕೆ. ಸಂಗಮೇಶ್ವರ್ (ಭದ್ರಾವತಿ) : ಮಾನ್ಯ ಅಧ್ಯಕ್ಷರೆ, ನಾವು ಈ ಸದನಕ್ಕೆ ಬರುವುದಕ್ಕೆ ಮುಂಚಿತವಾಗಿ ಏನು ತಿಳಿದುಕೊಂಡಿದ್ದೆವು ಎಂದರೆ, ಈ ಸದನದಲ್ಲಿ ಮನೆಯ ಯಜಮಾನರು ಸಭಾಧ್ಯಕ್ಷರಾಗಿದ್ದು, ಅವರು ಈ ಸದನದ ಎಲ್ಲಾ ಸದಸ್ಯರುಗಳಿಗೂ ರಕ್ಷಣೆ ಹಾಗೂ ಎಲ್ಲಾ ತರಹದ ಹಕ್ಕುಗಳನ್ನು ಕೊಡುತ್ತಾರೆಂದು ನಾವು ಭಾವಿಸಿಕೊಂಡಿದ್ದೆವು. ಆದರೆ, ಇಲ್ಲಿ ನೋಡಿದರೆ, ಇವ್ಹೊತ್ತು ಒಬ್ಬ ಹಿರಿಯ ನಾಯಕರು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡುತ್ತಿರುವಂತಹ ಸಂದರ್ಭದಲ್ಲಿ ಏಕೆ ರಾಜೀನಾಮೆ ಕೊಡುತ್ತಿದ್ದಾರೆಂದು ಅವರಿಗೆ ಆ ಕುರಿತು ಹೇಳುವುದಕ್ಕೂ ತಾವು ಒಂದು ಅವಕಾಶವನ್ನೂ ಕೊಡುತ್ತಿಲ್ಲದಿರುವುದನ್ನು ನೋಡಿದರೆ, ಇಡೀ ಕರ್ನಾಟಕದ ಜನತೆಗೆ ಸ್ವೀಕರ್ ಆಗಿರುವ ತಮ್ಮ ಮೇಲೆ ಸ್ವಲ್ಪ ಅನುಮಾನ, ಸಂಶಯ ಬರುತ್ತಿದೆ. ತಾವು ಇದಕ್ಕೆ ಅವಕಾಶ ಕೊಡದೆ, ದಯವಿಟ್ಟು ಅವರು ಏತಕ್ಕೋಸ್ಕರ ರಾಜೀನಾಮೆ ಕೊಡುತ್ತಿದ್ದಾರೆಂದು ಅವರಿಗೆ ಆ ಬಗ್ಗೆ ಮಾತನಾಡಲು ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ನಾನು ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು : ನಿಯಮಾವಳಿ ಪ್ರಕಾರ ಹೇಳಿ, ಜನರಲ್ ಆಗಿ ಹೇಳಬೇಡಿ.

(ಅಡಚಣೆ)

ಅಧ್ಯಕ್ಷರು : ನಿಯಮಗಳು ಸ್ಪಷ್ಟವಾಗಿ ಇದೆ. ಅಲ್ಲದೆ.....

(ಅಡಚಣೆ)

ಅಧ್ಯಕ್ಷರು : ಪ್ರತಿಭಟನೆ ಏಕೆ? ಸಿದ್ದರಾಮಯ್ಯನವರೆ, ನಿಯಮಗಳು ಅದರ ವಿರುದ್ಧ ಇರುವುದರಿಂದ ಪ್ರತಿಭಟನೆ ಏಕೆ?

(ಮಾನ್ಯ ಸದಸ್ಯರಾದ ಶ್ರೀ ಸಿದ್ದರಾಮಯ್ಯ, ಬಿ.ಆರ್. ಪಾಟೀಲ್, ಕೆ. ವೆಂಕಟೇಶ್, ವೈಜನಾಥ ಪಾಟೀಲ್ ಆದಿಯಾಗಿ ಕಾಂಗ್ರೆಸ್ ಪಕ್ಷದ ಮಾನ್ಯ ಸದಸ್ಯರುಗಳೆಲ್ಲರೂ ಸಭಾಧ್ಯಕ್ಷರ ಪೀಠದತ್ತ ತೆರಳಿ ಮಾತನಾಡುತ್ತಿದ್ದರು, ಕೆಲವು ಮಾನ್ಯ ಸದಸ್ಯರು ಘೋಷಣೆ ಕೂಗುತ್ತಿದ್ದರು)

ಅಧ್ಯಕ್ಷರು : ನಿಯಮಗಳು ಸ್ಪಷ್ಟವಾಗಿದೆ. ಅಂಥಾದ್ದರಲ್ಲಿ ನಿಯಮಗಳ ವಿರುದ್ಧ ಹೇಗೆ ಈ ಮನೆಯಲ್ಲಿ ನಡೆದುಕೊಳ್ಳುವುದಕ್ಕಾಗುತ್ತದೆ? ಆದ್ದರಿಂದ, ನಿಯಮಗಳನ್ನು ಎತ್ತಿ ಹಿಡಿಯಬೇಕಾದ್ದು ನಮ್ಮ ಕರ್ತವ್ಯ. ನಾವೇ ರಚನೆ ಮಾಡಿಕೊಂಡಿರುವ ನಿಯಮಗಳಿವೆಯಲ್ಲಾ, ಅದನ್ನು ಎತ್ತಿ ಹಿಡಿಯಬೇಕಾಗುತ್ತದೆ.

(ಸಭಾಧ್ಯಕ್ಷರ ಪೀಠದ ಮುಂದೆ ಹಾಗೂ ಬಾವಿಯಲ್ಲಿ ನಿಂತುಕೊಂಡು ಮಾನ್ಯ ಸದಸ್ಯರಾದ ಶ್ರೀ ಸಿದ್ದರಾಮಯ್ಯನವರಾದಿಯಾಗಿ ಕಾಂಗ್ರೆಸ್ ಪಕ್ಷದ ಸದಸ್ಯರೆಲ್ಲರೂ ಘೋಷಣೆ ಕೂಗುತ್ತಿದ್ದರು).

ಅಧ್ಯಕ್ಷರು : ನಾನು ಈಗ ಸದನವನ್ನು ಅರ್ಧ ಗಂಟೆ ಕಾಲ ಮುಂದೂಡುತ್ತಿದ್ದೇನೆ.

(ಸದನವು 12 ಗಂಟೆ 36 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ಅರ್ಧ ಗಂಟೆ ಬಳಿಕ ಸೇರುವುದಾಗಿ ತೀರ್ಮಾನಿಸಿತು).

ಸದನವು ಮಧ್ಯಾಹ್ನ 1 ಗಂಟೆ 19 ನಿಮಿಷಕ್ಕೆ ಪುನಃ ಸಮಾವೇಶಗೊಂಡಿತು.

(ಮಾನ್ಯ ಸಭಾಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನಲಂಕರಿಸಿದರು).

2. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ: ಮಾನ್ಯ ಸಿದ್ದರಾಮಯ್ಯನವರಿಗೆ ರಾಜೀನಾಮೆ ನೀಡಲು ಕಾರಣಗಳನ್ನು ತಿಳಿಸಲು ಅನುಮತಿ ಕೋರಿಕೆ.

(ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಸದಸ್ಯರು ಹಾಗೂ ಮಾನ್ಯ ಸದಸ್ಯರುಗಳಾದ ಶ್ರೀ ಸಿದ್ದರಾಮಯ್ಯ, ಶ್ರೀ ವೈಜನಾಥ ಪಾಟೀಲ್, ಡಾ: ಹೆಚ್.ಸಿ. ಮಹದೇವಪ್ಪ, ಶ್ರೀ ಹೆಚ್.ವೈ. ಮೇಟಿ, ಶ್ರೀ ಮಹದೇವ್ ಮತ್ತು ಶ್ರೀ ಕೆ. ವೆಂಕಟೇಶ್‌ರವರು ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದರು).

3. ಪ್ರಕಟಣೆ

ಅಧ್ಯಕ್ಷರು : ಮಾನ್ಯ ಸಮಾಜ ಕಲ್ಯಾಣ ಸಚಿವರಾದ ಬಾಲಚಂದ್ರ ಜಾರಕಿಹೊಳಿಯವರು ಭೋಜನ ಕೂಟವನ್ನು ಏರ್ಪಾಡು ಮಾಡಿದ್ದಾರೆ.

(ಅಡಚಣೆ)

ಅಧ್ಯಕ್ಷರು : ಮಾನ್ಯ ಸಚಿವರು ಈ ಭೋಜನ ಕೂಟವನ್ನು ಮಾನ್ಯ ಸದಸ್ಯರ ಗೌರವಾರ್ಥ ಮಧ್ಯಾಹ್ನ 1.30 ಗಂಟೆಗೆ ಏರ್ಪಾಡು ಮಾಡಿದ್ದಾರೆ. ಆದ್ದರಿಂದ, ಅದರಲ್ಲಿ ಭಾಗವಹಿಸಬೇಕೆಂದು ನಾನು ಎಲ್ಲಾ ಮಾನ್ಯ ಸದಸ್ಯರನ್ನೂ ಕೋರುತ್ತೇನೆ.

ಈಗ ಸದನವನ್ನು ಮಧ್ಯಾಹ್ನ 3.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 1 ಗಂಟೆ 21 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ 3.00 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು).

(ಸದನವು 3 ಗಂಟೆ 27 ನಿಮಿಷಕ್ಕೆ ಪ್ರಾರಂಭವಾಯಿತು)

(ಅಧ್ಯಕ್ಷ ಪೀಠದಲ್ಲಿ ಸಭಾಧ್ಯಕ್ಷರು (ಶ್ರೀ ಕೃಷ್ಣರವರು) ಉಪಸ್ಥಿತರಿದ್ದರು)

4. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ: ಮಾನ್ಯ ಸಿದ್ದರಾಮಯ್ಯನವರಿಗೆ ಹೇಳಿಕೆ ನೀಡಲು ಅನುಮತಿ ಕೋರಿಕೆ.

(ಕಾಂಗ್ರೆಸ್ ಸದಸ್ಯರು ಮಾನ್ಯ ಸಿದ್ದರಾಮಯ್ಯನವರಿಗೆ ತಮ್ಮಹೇಳಿಕೆಯನ್ನು ಕೊಡಲು ಅವಕಾಶ ಕೊಡಬೇಕೆಂದು ಒತ್ತಾಯಿಸಿ ಸದನದ ಬಾವಿಯಲ್ಲಿ ಧರಣಿ ಕುಳಿತಿದ್ದರು).

ಅಧ್ಯಕ್ಷರು : ಈಗಾಗಲೇ ನಾನು ರೂಲಿಂಗ್‌ನ್ನು ಕೊಟ್ಟಿದ್ದೇನೆ. ದಯಮಾಡಿ ಎಲ್ಲರೂ ತಮ್ಮ ತಮ್ಮ ಸ್ಥಾನದಲ್ಲಿ ಕುಳಿತುಕೊಳ್ಳಿ. ಬಿಜಿನೆಸ್ ಅಡ್ವೈಸರಿ ಕಮಿಟಿ ಸಭೆಯಲ್ಲಿ ಎಲ್ಲಾ ಬೇಡಿಕೆಗಳ ಮೇಲೆ ಚರ್ಚೆಯಾಗಬೇಕೆಂದು ತೀರ್ಮಾನವಾಯಿತು. ಇನ್ನೂ ಬಹಳಷ್ಟು ಬೇಡಿಕೆಗಳು ಇವೆ. ನೀವು ಬೇಡಿಕೆಗಳ ಮೇಲೆ ಚರ್ಚೆ ಆರಂಭ ಮಾಡದೇ ಇದ್ದರೆ, ಗಿಲೊಟಿನ್ ಆಗುತ್ತದೆ. I have given my ruling.

(ಅಡಚಣೆ)

ಅಧ್ಯಕ್ಷರು : ಈಗ ಸದನವನ್ನು ಅರ್ಧ ಗಂಟೆಗಳ ಕಾಲ ಮುಂದೂಡುತ್ತೇನೆ.

(ಸದನವು 3 ಗಂಟೆ 28 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ಅಂದರೆ ಅರ್ಧ ಗಂಟೆಯ ನಂತರ ಸಮಾವೇಶಗೊಳ್ಳಲು ನಿಃಶ್ಚಯಿಸಿತು).

(ಸದನವು 4.25ಕ್ಕೆ ಸಮಾವೇಶಗೊಂಡಿತು)

(ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನಲಂಕರಿಸಿದರು)

5. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ: ಮಾನ್ಯ ಸಿದ್ದರಾಮಯ್ಯನವರಿಗೆ ಹೇಳಿಕೆ ನೀಡಲು ಅನುಮತಿ ಕೋರಿಕೆ.

(ಕಾಂಗ್ರೆಸ್ ಪಕ್ಷದ ಸದಸ್ಯರು ಹಾಗೂ ಎ ಬಿ ಪಿ ಜೆ ಡಿ ಯ ಸದಸ್ಯರು ಧರಣಿ ಮುಂದುವರೆಸಿದ್ದರು)

ಶ್ರೀ ಎನ್. ಧರಂಸಿಂಗ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾವು ಪ್ರೊಟೆಸ್ಟ್ ಮಾಡುತ್ತಿದ್ದೇವೆ. ಅಜೆಂಡಾ ಪ್ರಕಾರ ಡಿಮ್ಯಾಂಡ್ಸ್ ಮೇಲೆ ಮಾತ ನಾಡಬೇಕಾಗಿತ್ತು. ಸಿದ್ದರಾಮಯ್ಯನವರು ರಾಜೀನಾಮೆ ಕೊಡುವವರಿದ್ದು ಅದರ ಬಗ್ಗೆ ವಿವರಿಸಲು ಕಾಲಾವಕಾಶ ಕೊಡಿ ಎಂದು ನಾವು ಹೇಳಿದ್ದೆವು.

ಶ್ರೀ ಆರಗ ಜ್ಞಾನೇಂದ್ರ : ನಮ್ಮ ಕಾಂಗ್ರೆಸ್ ಮಿತ್ರರು ಈ ಅಧಿವೇಶನ ಪೂರ್ತಿ ಬಾವಿಯೊಳಗೇ ಕಳೆಯುತ್ತಿದ್ದಾರೆ. ಇದು ನಮ್ಮ ರಾಜ್ಯದ ದೊಡ್ಡ ದುರಂತ. ಪೂರ್ತಿ ಬಾವಿಯೊಳಗೆ ಬಿದ್ದುಬಿಟ್ಟಿದ್ದಾರೆ.

ಶ್ರೀ ಎನ್. ಧರಂಸಿಂಗ್ : ಇವತ್ತು ನೀವು ಮನಿ ಬಿಲ್ ತಂದಿದ್ದೀರಿ. ಮನಿ ಬಿಲ್‌ಗೆ ನಮ್ಮದೇನೂ ವಿರೋಧವಿಲ್ಲ. ಆದರೆ ನೀವು ಈ ರೀತಿಯಾಗಿ ಸದನ ನಡೆಸಬೇಕು ಎಂದು ತೀರ್ಮಾನ ಕೈಗೊಂಡಿರುವುದರಿಂದ ನಮಗೆ ಬಹಳಷ್ಟು ನೋವಾಗುತ್ತಿದೆ. ನೀವು ಅವಕಾಶವನ್ನು ಕೂಡ ಕೊಡುತ್ತಿಲ್ಲ. ಈ ಮಧ್ಯೆ ಇವತ್ತು ನೀವು ತರಾತುರಿಯಲ್ಲಿ ಮನಿ ಬಿಲ್ ಕೂಡ ತಂದಿದ್ದೀರಿ.

ಶ್ರೀ ಆರಗ ಜ್ಞಾನೇಂದ್ರ : ಅವರ ಆಡಳಿತದ ಕಾಲದಲ್ಲಿ ಜನರನ್ನು ಬಾವಿಯಲ್ಲಿಟ್ಟರು. ಈಗ ವಿರೋಧ ಪಕ್ಷಕ್ಕೆ ಬಂದ ಮೇಲೆ ಅವರು ಬಾವಿಯಲ್ಲಿ ಬಿದ್ದಿದ್ದಾರೆ.

ಅಧ್ಯಕ್ಷರು : ದಯಮಾಡಿ ಎಲ್ಲರೂ ಅರ್ಥಮಾಡಿಕೊಳ್ಳಬೇಕು. ಬಿಸಿನೆಸ್ ಅಡ್ವೈಸರಿ ಕಮಿಟಿ ತೀರ್ಮಾನದ ಪ್ರಕಾರ ಇವತ್ತು ಕ್ವೊಶ್ಚನ್ ಅವರ್ ಇಲ್ಲ, ಜೀರೋ ಅವರ್ ಇಲ್ಲ, ಅಜೆಂಡಾದಲ್ಲಿರುವುದನ್ನು ಮಾಡಬೇಕೆಂದು ತೀರ್ಮಾನವಾಗಿತ್ತು.

ಶ್ರೀ ಎನ್. ಧರಂಸಿಂಗ್ : ತೀರ್ಮಾನದ ಪ್ರಕಾರ ಇಲ್ಲಿ ಏನಾಗಿದೆ? ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಏನು ಮಾತನಾಡಿದಿರಿ? ಏನಾಗಬೇಕಿತ್ತು?

(ಅಡಚಣೆ)

ಅಧ್ಯಕ್ಷರು : ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ತೀರ್ಮಾನವಾಗಿತ್ತು. ಆದರೆ ನೀವು ಬೆಳಗ್ಗೆಯಿಂದಲೂ ಇಲ್ಲಿ ಧರಣಿ ಮಾಡುತ್ತಿದ್ದೀರಿ. ಈ ರೀತಿಯಾಗಿದೆ ಎಂದು ನಾನು ನಿಮಗೆ ಬೆಳಗ್ಗೆಯೇ ಹೇಳಿದೆ. ಎಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಎಂದು ಹೇಳಿದರೂ ಕೇಳುತ್ತಿಲ್ಲ.

(ಅಡಚಣೆ)

ಶ್ರೀಮತಿ ಸುನೀತಾ ವೀರಪ್ಪಗೌಡ : ಮಾನ್ಯ ಸಭಾಧ್ಯಕ್ಷರೇ, ನಮ್ಮಲ್ಲಿ ಬಿತ್ತನೆ ಬೀಜದ ಬಗ್ಗೆ ಗಲಾಟೆಯಾಗುತ್ತಿದೆ. ಮೊದಲು ಸಭೆ ನಡೆಸಿ.

(ಅಡಚಣೆ)

ಅಧ್ಯಕ್ಷರು : ಕಾನೂನಿನ ಪ್ರಕಾರ ನಾವು ತೀರ್ಮ ಕೊಡಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರಿಗೆ ಐದು ನಿಮಿಷ ಮಾತನಾಡಲು ಅವಕಾಶ ಕೊಟ್ಟರೆ ಆಗುತ್ತದೆ.

(ಅಡಚಣೆ)

ಶ್ರೀಮತಿ ಸುನೀತಾ ವೀರಪ್ಪಗೌಡ : ಮಾನ್ಯ ಸಭಾಧ್ಯಕ್ಷರೇ, ನಮ್ಮ ಕಷ್ಟವನ್ನು ನೋಡಿ. ನಾವು ಐದು ದಿವಸಗಳಿಂದ ಏನನ್ನೂ ಹೇಳಿಕೊಳ್ಳಲು ಆಗಿಲ್ಲ. ಹೀಗಾದರೆ ಕ್ಷೇತ್ರದ ಕಷ್ಟಗಳನ್ನು ಹೇಗೆ ಮಾತನಾಡುವುದು? ಸುಮ್ಮನೆ ಹೀಗೆ ಬಂದು ಹೋಗುತ್ತಾರೆ. ಇಲ್ಲಿ ನಮಗೇನು ಗೊತ್ತಾಗುತ್ತಿಲ್ಲ.

(ಅಡಚಣೆ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸಿದ್ದರಾಮಯ್ಯನವರಿಗೆ ಐದು ನಿಮಿಷ ಮಾತನಾಡಲು ಅವಕಾಶ ಕೊಟ್ಟರೆ ಅದರಲ್ಲಿ ತೊಂದರೆ ಏನಿದೆ?

(ಅಡಚಣೆ)

ಶ್ರೀಮತಿ ಸುನೀತಾ ವೀರಪ್ಪಗೌಡ : ನಮ್ಮ ಕ್ಷೇತ್ರದಲ್ಲಿ ಬಿತ್ತನೆ ಬೀಜದ ಗಲಾಟೆ ನಡೆಯುತ್ತಿದೆ. ಇಲ್ಲಿ ಈ ರೀತಿ ಮಾಡಿದರೆ ನಾವು ಯಾರಿಗೆ ಹೇಳಿಕೊಳ್ಳಬೇಕು?

ಅಧ್ಯಕ್ಷರು : ಎಲ್ಲಾ ಸದಸ್ಯರನ್ನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಈಗ ಬೇಡಿಕೆಯ ಮೇಲೆ ಚರ್ಚೆಯನ್ನು ತೆಗೆದುಕೊಳ್ಳೋಣ. ದಯಮಾಡಿ ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ.

(ಅಡಚಣೆ)

(ಧರಣಿ ನಿರತರು ಬಾವಿಯಿಂದ ಮಾತನಾಡುತ್ತಿದ್ದರು)

ಅಧ್ಯಕ್ಷರು : ದಯಮಾಡಿ ನಿಮ್ಮ ನಿಮ್ಮ ಸ್ಥಾನಗಳಿಗೆ ಹೋಗಿ. ದಯಮಾಡಿ ಕೇಳಿ. Whatever may be your News.

(ಅಡಚಣೆ)

ಅಧ್ಯಕ್ಷರು : ದಯಮಾಡಿ ಎಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಹೋಗಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ದಯವಿಟ್ಟು ನೀವು ಅವರಿಗೆ ಒಂದೈದು ನಿಮಿಷ ಮಾತನಾಡುವುದಕ್ಕೆ ಬಿಟ್ಟುಬಿಡಿ.

ಅಧ್ಯಕ್ಷರು : ನಾನು ರೂಲಿಂಗ್ ಕೊಟ್ಟಿದ್ದೇನೆ. ಮರುಪರಿಶೀಲನೆ ಮಾಡುವ ಅಗತ್ಯವಿಲ್ಲ ಎಂದು ಹೇಳಿದ್ದೇನೆ. ಮತ್ತೆ ಮತ್ತೆ ಅದನ್ನು ಮಾತನಾಡಿದರೆ ಏನೂ ಪ್ರಯೋಜನವಾಗುವುದಿಲ್ಲ. ದಯಮಾಡಿ ನಿಮ್ಮ ನಿಮ್ಮ ಸ್ಥಾನಗಳಿಗೆ ಹೋಗಿ.

(ಅಡಚಣೆ)

ಅಧ್ಯಕ್ಷರು : ದಯಮಾಡಿ ನಿಮ್ಮ ನಿಮ್ಮ ಸ್ಥಾನಗಳಿಗೆ ಹೋಗಬೇಕು ಎಂದು ವಿನಂತಿ ಮಾಡುತ್ತೇನೆ. ಇಲ್ಲಿ ವೆಲ್‌ನಲ್ಲಿ ನಿಂತುಕೊಂಡು ಮಾತನಾಡುವುದು ಸರಿಯಲ್ಲ. ದಯಮಾಡಿ ನಿಮ್ಮ ನಿಮ್ಮ ಸ್ಥಾನಗಳಿಗೆ ಹೋಗಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ಇದು ಸರಿಯಲ್ಲ. ಪ್ರತಿಯೊಂದಕ್ಕೂ ವೆಲ್‌ನಲ್ಲಿ ಬರತಕ್ಕಂಥಾದ್ದು, ಇಲ್ಲಿ ಮಾತನಾಡತಕ್ಕಂಥಾದ್ದು, ಸದನದ ಕಾರ್ಯಕಲಾಪಗಳು ನಡೆಯಲು ಬಿಡದೇ ಇರತಕ್ಕಂಥಾದ್ದು ಸರಿಯಲ್ಲ. ದಯಮಾಡಿ ಸ್ಥಾನಗಳಿಗೆ ಹೋಗಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವು ಕೇಳುವುದು ಇಷ್ಟೇ ತಾನೇ. ಅವರು ರೆಸಿಗ್ನೇಷನ್ ಕೊಡುತ್ತಿದ್ದಾರೆ. ಎಕ್ಸ್‌ಪ್ಲೈನ್ ಮಾಡುವುದಕ್ಕೆ ದಯವಿಟ್ಟು ಅವರಿಗೆ ಅವಕಾಶ ಮಾಡಿಕೊಡಿ.

ರೂಲ್ 332 ಕ್ಲಿಯರ್ ಇದೆ. ತಾವು ಪರ್ಮಿಟ್ ಮಾಡಬಹುದು. ಆ ರೀತಿ ಅವಕಾಶವಿದ್ದಾಗ ನೀವು ಅವಕಾಶ ಕೊಡದೇ ಹೋದರೆ ಆಪಾದನೆ ನಿಮ್ಮ ಮೇಲೆ ಬರುತ್ತದೆ.

ಅಧ್ಯಕ್ಷರು : ಅದೆಲ್ಲವನ್ನೂ ನಾನು ಹೇಳಿದ್ದೇನೆ. ನಾನು ರೂಲಿಂಗ್ ಕೊಟ್ಟಿದ್ದೇನೆ. ಮತ್ತೆ ಮತ್ತೆ ನೀವು ಅದನ್ನು ಕೇಳುವ ಅಗತ್ಯವಿಲ್ಲ.

(ಅಡಚಣೆ)

6. ಸಭೆಯ ಮುಂದಿಡಲಾದ ಕಾಗದ ಪತ್ರಗಳು.

ಅಧ್ಯಕ್ಷರು : ಈಗ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು.

ಶ್ರೀ ಎಸ್.ಬಿ. ಪಾಟೀಲ್, ಅಪರ ಕಾರ್ಯದರ್ಶಿ (ವಿಧಾನಸಭೆ) : ಮಾನ್ಯ ಅಧ್ಯಕ್ಷರೆ, "ವಿಧಾನ ಪರಿಷತ್ತಿನ ಅಂಗೀಕೃತ ರೂಪದಲ್ಲಿರುವ 2005ನೇ ಸಾಲಿನ ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) (ಎರಡನೇ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದಿಡುತ್ತೇನೆ."

ಅಧ್ಯಕ್ಷರು : ಮಂಡಿಸಲಾಯಿತು.

(ಅಡಚಣೆ)

ಅಧ್ಯಕ್ಷರು : ಈಗ ವಿತ್ತೀಯ ಕಾರ್ಯಕಲಾಪಗಳನ್ನು ತೆಗೆದುಕೊಳ್ಳೋಣ.

(ಅಡಚಣೆ)

7. ವಿತ್ತೀಯ ಕಾರ್ಯಕಲಾಪಗಳು

ವಿಷಯ: 2006-07ನೇ ಸಾಲಿನ ಅನುದಾನ ಬೇಡಿಕೆಗಳನ್ನು ಮತಕ್ಕೆ ಹಾಕುವುದು.

(ಅಡಚಣೆ)

ಅಧ್ಯಕ್ಷರು : ನಾನು ಈಗ ಎಲ್ಲಾ ಬೇಡಿಕೆಗಳನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ:

"31-3-2007ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಗಳ ಸಂಖ್ಯೆ: 1 ರಿಂದ 28ಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗೂ ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು."

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಎಲ್ಲಾ ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.

(ಅನುಬಂಧ-1)

(ಸದನವು ಅಂಗೀಕರಿಸಿದ ಬೇಡಿಕೆಗಳ ಪಟ್ಟಿಯನ್ನು ಲಗತ್ತಿಸಲಾಗಿದೆ)

8. ಶಾಸನ ರಚನೆ.

(ಅ) ಕರ್ನಾಟಕ ಧನವಿನಿಯೋಗ (ಸಂಖ್ಯೆ:3) ವಿಧೇಯಕ 2006 ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, "2006ರ ಕರ್ನಾಟಕ ಧನವಿನಿಯೋಗ (ಸಂಖ್ಯೆ : 3) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"2006ರ ಕರ್ನಾಟಕ ಧನವಿನಿಯೋಗ (ಸಂಖ್ಯೆ : 3) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

(ಅಡಚಣೆ)

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, "2006ರ ಕರ್ನಾಟಕ ಧನವಿನಿಯೋಗ (ಸಂಖ್ಯೆ : 3) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ."

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.

ಶ್ರೀ ವಾಟಾಳ್ ನಾಗರಾಜ್ : ತಾವು ಈ ಸದನವನ್ನು ನಡೆಸುತ್ತಿರುವಂಥ ರೀತಿ ನೋಡಿ ಬಹಳ ನೋವಾಗಿದೆ. ನಾನು ಸದನ ಬಿಟ್ಟು ಹೊರಗಡೆ ಹೋಗುತ್ತಿದ್ದೇನೆ. ನಿಮ್ಮ ಹಣೆಬರಹ ಏನು ಬೇಕಾದರೂ ಮಾಡಿಕೊಳ್ಳಿ.

(ವಾಟಾಳ್ ಪಕ್ಷದ ಮಾನ್ಯ ಶ್ರೀ ವಾಟಾಳ್ ನಾಗರಾಜ್‌ರವರು ಸದನದಿಂದ ಹೊರ ನಡೆದರು)

(ಅಡಚಣೆ)

(ಅ) ಕರ್ನಾಟಕ ಧನವಿನಿಯೋಗ (ಸಂಖ್ಯೆ : 3) ವಿಧೇಯಕ 2006 ಪರ್ಯಾಲೋಚನಾ ಪ್ರಸ್ತಾವ

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, "2006ರ ಕರ್ನಾಟಕ ಧನವಿನಿಯೋಗ (ಸಂಖ್ಯೆ : 3) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು.

(ಅಡಚಣೆ)

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

'2006ರ ಕರ್ನಾಟಕ ಧನವಿನಿಯೋಗ (ಸಂಖ್ಯೆ : 3) ವಿಧೇಯಕವನ್ನು ಪರ್ಯಾಲೋಚಿಸುವುದು.'

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ಹಾಗೂ 3

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "ಖಂಡ 2 ಹಾಗೂ 3 ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಹಾಗೂ 3 ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವದ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, "2006ರ ಕರ್ನಾಟಕ ಧನವಿನಿಯೋಗ (ಸಂಖ್ಯೆ : 3) ವಿಧೇಯಕವನ್ನು ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಅಧ್ಯಕ್ಷರು : ಈಗ ಸದನವನ್ನು ನಾಳೆ ಬೆಳಗ್ಗೆ 10–00 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು ಸಂಜೆ 4 ಗಂಟೆ 36 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ: 18ನೇ ಜುಲೈ 2006ರ ಮಂಗಳವಾರದಂದು ಬೆಳಗ್ಗೆ 11–00 ಗಂಟೆಗೆ ಸೇರಲು ನಿಃಶ್ಚಯಿಸಿತು).